ಆ) ಹೌದು, 2009–10ನೇ ಸಾಲಿನಲ್ಲಿ 723 ಬಾಂಡುಗಳು ಬರಬೇಕಾಗಿದ್ದು, ಅದರಲ್ಲಿ 665 ಬಾಂಡುಗಳು ಸ್ವೀಕೃತವಾಗಿವೆ ಇನ್ನು 58 ಬಾಂಡುಗಳಲ್ಲಿ 54 ಬಾಂಡ್‌ಗಳು ದ್ವಿಪ್ರತಿಯಲ್ಲಿ ಬಂದಿದ್ದು, ಬಾಕಿ 4 ಬಾಂಡ್‌ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತದೆ. 2011–12 ನೇ ಸಾಲಿನ 118 ಬಾಂಡ್‌ಗಳು ನೀಡಲು ಬಾಕಿಯಿರುತ್ತದೆ.

ಇ) 2009–10ನೇ ಅರ್ಜಿಗಳಲ್ಲಿನ ಮಾಹಿತಿಯಲ್ಲಿ ತಪ್ಪುಗಳಿದ್ದು, ಸರಿಪಡಿಸಿ ಬಾಂಡ್‌ಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗುತ್ತಿದೆ. 2011–12 ನೇ ಸಾಲಿನ ಬಾಂಡ್‌ಗಳನ್ನು ಅನುದಾನದ ಲಭ್ಯತೆ ಮೇಲೆ ವಿತರಿಸಲಾಗುತ್ತಿದೆ.

ಈ) ಹೌದು, ಕ್ರಮ ತೆಗೆದುಕೊಂಡಿದೆ.

ಉ) ಪ್ರಸಕ್ತ ಸಾಲಿನಲ್ಲಿ ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

ಮಕ್ಕಳಿಗೆ ಹಾಗೂ ಗರ್ಭಿಣಿ ಮಹಿಳೆಯರಿಗೆ ಆಹಾರ ಒದಗಿಸುವುದು

62 (38)

ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)

ಅ) ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅಂಗನವಾಡಿಗಳಲ್ಲಿ ಮಕ್ಕಳಿಗೆ ಮತ್ತು ಗರ್ಭಿಣಿ ಮಹಿಳೆಯರಿಗೆ ಒದಗಿಸು–ತ್ತಿರುವ ಆಹಾರಕ್ಕೆ ನಿಗಧಿ ಪಡಿಸಿರುವ ನಿಯಮಗಳೇನು;

ಆ) ಕ್ರಮಬದ್ಧತೆಯಿಲ್ಲದ ರೀತಿಯಲ್ಲಿ ಆಹಾರ ಒದಗಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ತೆಗೆದುಕೊಂಡ ಕ್ರಮಗಳೇನು?

ಶ್ರೀ ಕಳಕಪ್ಪ ಜಿ.ಬಂಡಿ
(ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) 1) ರಾಜ್ಯದ ಅಂಗನವಾಡಿ ಕೇಂದ್ರಗಳಲ್ಲಿ 06 ತಿಂಗಳಿಂದ 6 ವರ್ಷದ ಮಕ್ಕಳು, ಗರ್ಭಿಣಿ, ಬಾಣಂತಿ ಹಾಗೂ ಪ್ರಾಯಪೂರ್ವ ಬಾಲಕಿಯರಿಗೆ ಪೂರಕ ಪೌಷ್ಟಿಕ ಆಹಾರವನ್ನು ನೀಡಲಾಗುತ್ತಿದೆ.

2) 06 ತಿಂಗಳಿಂದ 3 ವರ್ಷದ ಮಕ್ಕಳಿಗೆ ರೂ.4.60 ರ ಮೌಲ್ಯದ ಹಾಗೂ ಗರ್ಭಿಣಿ, ಬಾಣಂತಿಯರಿಗೆ ರೂ.5.75ರ ಹಾಗೂ ತೀವ್ರ ಅಪೌಷ್ಟಿಕ

ಮಕ್ಕಳಿಗೆ ರೂ.6.90 ಮೌಲ್ಯದ ಆಹಾರ ಪದಾರ್ಥಗಳನ್ನು ಮನೆಗೆ ನೀಡಲಾಗುತ್ತದೆ.

3) 06 ತಿಂಗಳಿಂದ 6 ವರ್ಷದ ಮಕ್ಕಳಿಗೆ 12–15 ಗ್ರಾಂ ಪ್ರೋಟೀನ್, 500 ಕ್ಯಾಲೋರಿ, ಗರ್ಭಿಣಿ, ಬಾಣಂತಿ, ಪ್ರಾಯಪೂರ್ವ ಬಾಲಕಿಯರಿಗೆ 18–20 ಗ್ರಾಂ ಪ್ರೋಟೀನ್ 600 ಕ್ಯಾಲೋರಿ ಹಾಗೂ ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳಿಗೆ 20–25 ಗ್ರಾಂ ಪ್ರೋಟೀನ್ 800 ಕ್ಯಾಲೋರಿಯನ್ನೊಳಗೊಂಡ ಆಹಾರವನ್ನು ನೀಡಬೇಕಾಗಿರುತ್ತದೆ.

4) 3–6 ವರ್ಷದ ಮಕ್ಕಳಿಗೆ ರೂ.4.60 ಮೌಲ್ಯದ ಆಹಾರವನ್ನು ಅಂಗನವಾಡಿ ಕೇಂದ್ರದಲ್ಲಿ ದಿನಕ್ಕೆ 2 ಬಾರಿ ಬಿಸಿ ಆಹಾರವನ್ನು ಸಿದ್ದಪಡಿಸಿ ನೀಡಲಾಗುತ್ತಿದೆ.

5) ತೀವ್ರತರ ಅಪೌಷ್ಟಿಕತೆಯಿಂದ ಬಳಲುತ್ತಿರುವ 6 ತಿಂಗಳಿಂದ 6 ವರ್ಷದ ಮಕ್ಕಳಿಗೆ ಅಂಗನವಾಡಿ ಕೇಂದ್ರಗಳ ಮೂಲಕ ವಾರದಲ್ಲಿ ನಾಲ್ಕು ದಿನ ಮೊಟ್ಟೆ ಹಾಗೂ 2 ದಿನ ಹಾಲನ್ನು ನೀಡಲಾಗುತ್ತಿದೆ.

6) ಅಂಗನವಾಡಿ ಕೇಂದ್ರಕ್ಕೆ ಅಗತ್ಯವಿರುವ ಆಹಾರವನ್ನು ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಹಾಗೂ ತರಬೇತಿ ಕೇಂದ್ರಗಳು ಸರಬರಾಜು ಮಾಡುತ್ತಿವೆ.

7) ದಿನಾಂಕ:01–04–2012 ರಿಂದ ರಾಜ್ಯದಲ್ಲಿ ಸರ್ಕಾರವು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯ ಮೂಲಕ ಸ್ಥಳೀಯ ಆಹಾರವನ್ನು ಆಯ್ಕೆ ಮಾಡಿಕೊಂಡು ಸಮಿತಿಯೇ ದರ ನಿಗದಿ ಪಡಿಸಿಕೊಂಡು ಸರ್ಕಾರ ನಿಗದಿಪಡಿಸಿರುವ ಘಟಕ ವೆಚ್ಚದಲ್ಲಿ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಮತ್ತು ತರಬೇತಿ ಕೇಂದ್ರಗಳ ಮೂಲಕ ಆಹಾರ ಸರಬರಾಜು ಮಾಡಲು ಆದೇಶಿಸಿರುತ್ತದೆ.

8) ಜಿಲ್ಲಾ ಮಟ್ಟದ ಮೇಲ್ವಿಚಾರಣಾ ಸಮಿತಿಯು ಫಲಾನುಭವಿಗಳ ಇಚ್ಚೆಗನುಸಾರ ಸ್ಥಳೀಯ ಆಹಾರವನ್ನು ಆಯ್ಕೆ ಮಾಡಿ ಸರಬರಾಜು ಮಾಡುವ ಪದ್ಧತಿ ಜಾರಿಯಲ್ಲಿರುತ್ತದೆ.

ಆ) ಸ್ಥಳೀಯವಾಗಿ ದೊರಕುವ ಆಹಾರವನ್ನು ಜಿಲ್ಲಾ ಮಟ್ಟದ ಸಮಿತಿಯೇ ಆಯ್ಕೆ ಮಾಡುತ್ತಿದೆ. ಅಂಗನವಾಡಿ ಕೇಂದ್ರಗಳಲ್ಲಿ ತಯಾರಿಸುವ ಆಹಾರವು ಜಿಲ್ಲೆಯಿಂದ ಜಿಲ್ಲೆಗೆ ವ್ಯತ್ಯಾಸವಿದ್ದರೂ, ಕೇಂದ್ರ ಸರ್ಕಾರವು

ನಿಗದಿಪಡಿಸಿರುವ ಮಾರ್ಗಸೂಚಿಯನ್ವಯ ಪೂರಕ ಪೌಷ್ಟಿಕ ಆಹಾರವನ್ನು ಫಲಾನುಭವಿಗಳಿಗೆ ಒದಗಿಸಲಾಗುತ್ತಿದೆ.

ಕೇಂದ್ರ ಸರ್ಕಾರದ NEET ಪರೀಕ್ಷೆ

31 (51)

ಶ್ರೀ ಖಾದರ್ ಯು.ಟಿ. (ಮಂಗಳೂರು)

ಅ) ಕೇಂದ್ರ ಸರ್ಕಾರ ಜಾರಿಗೆ ತಂದಿರುವ CET ಮಾದರಿಯ NEET (National Eligibility Entrance Test) ರಾಜ್ಯದಲ್ಲಿ ಜಾರಿಗೊಳಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವ ವರ್ಷದಿಂದ ಜಾರಿಗೊಳಿಸಲಾಗಿದೆ?

ಆ) ಕೇಂದ್ರ ಸರ್ಕಾರದ ಈ ಯೋಜನೆಗೆ ರಾಜ್ಯವು ಅಸಮ್ಮತಿ ಸೂಚಿಸಿರುವುದು ನಿಜವೇ; ಇದಕ್ಕೆ ಕಾರಣಗಳೇನು (ವಿವರ ನೀಡುವುದು)?

ಇ) NEET ಜಾರಿಗೊಳಿಸಿರುವುದರಿಂದ ರಾಜ್ಯದ ಬಡ ವಿದ್ಯಾರ್ಥಿಗಳಿಗೆ ಅನುಕೂಲವಾಗುವುದೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಈ ಬಗ್ಗೆ ರಾಜ್ಯ ಸರ್ಕಾರ ಕೈಗೊಂಡಿರುವ ನಿಲುವೇನು;

ಎಸ್.ಎ.ರಾಮದಾಸ್(ವೈದ್ಯಕೀಯ ಶಿಕ್ಷಣ ಸಚಿವರು)

ಅ) ಕೇಂದ್ರ ಸರ್ಕಾರ ಜಾರಿಗೆ ತಂದಿರುವ CET ಮಾದರಿಯ NEET (National Eligibility Entrance Test) ಅನ್ನು 2013–14 ನೇ ಶೈಕ್ಷಣಿಕ ವರ್ಷದಿಂದ ಜಾರಿಗೊಳಿಸಲು ಕೇಂದ್ರ ಸರ್ಕಾರವು ಉದ್ದೇಶಿಸಿದೆ.

ಆ,ಇ,ಮತ್ತು ಈ) ಇದೂವರೆವಿಗೂ ಪ್ರತಿ ವಿದ್ಯಾರ್ಥಿಯು ಎಂಬಿಬಿಎಸ್ ಪ್ರವೇಶಕ್ಕಾಗಿ 25 ಪ್ರವೇಶ ಪರೀಕ್ಷೆಗಳನ್ನು ಬರೆಯಬೇಕಾಗಿದ್ದು ಇದು ವಿದ್ಯಾರ್ಥಿಗಳ ಮೇಲೆ ಅತಿಯಾದ ಒತ್ತಡವನ್ನು ಉಂಟು ಮಾಡುತ್ತಿತ್ತು. ಈ ಒತ್ತಡವನ್ನು ಕಡಿಮೆಗೊಳಿಸಲು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ NEET ಪ್ರವೇಶ ಪರೀಕ್ಷೆಯನ್ನು ಜಾರಿಗೊಳಿಸಲು ಕೇಂದ್ರ ಸರ್ಕಾರವು ತೀರ್ಮಾನಿಸಿದ್ದು, ರಾಜ್ಯವಾರು ಮೆರಿಟ್ ಪಟ್ಟಿಯನ್ನು ಸಿಬಿಎಸ್‌ಸಿಯವರು ತಯಾರಿಸಿ ಸಂಬಂಧಪಟ್ಟ ರಾಜ್ಯಕ್ಕೆ ಒದಗಿಸಲಿದ್ದು, ಎಂಬಿಬಿಎಸ್ ಪ್ರವೇಶಕ್ಕೆ ಅಳವಡಿಸಿಕೊಳ್ಳಬೇಕಾದ ಮೀಸಲಾತಿ ನೀತಿ ಹಾಗೂ ಸೀಟು ಹಂಚಿಕೆಯನ್ನು ರಾಜ್ಯ ಸರ್ಕಾರವೇ ನಿರ್ಧರಿಸಬೇಕಾಗಿರುವುದರಿಂದ ಈ ಪರೀಕ್ಷೆಯಿಂದ